ಬಿಚ್ಚಿ ನೋಡಿ 'ಇಷ್ಟೊಂದು ದುಡ್ಡು ಎಂತಕ್ಕೆ ಇಟ್ಟಿದೀಯೇ? ನಂಗೇನು ಖರ್ಚಿರುತ್ತೆ?' ಕೇಳುತ್ತಿದ್ದಳು ನಾಗಶ್ರೀ.

'ಇಟ್ಕಂಡಿರು. ಎಂತಕ್ಕಾರೂ ಬೇಕಾಗುತ್ತೆ..'

ಎಂತಕ್ಕೂ ಬೇಕಾಗುತ್ತಿರಲಿಲ್ಲ ಪರ್ಸ್‌ನಲ್ಲಿ ಜಮಾವಣೆಯಾಗುತ್ತಿದ್ದ ದುಡ್ಡು. ಪೇಟೆಗೆ ಸಿನಿಮಾ ನೋಡಲು ಹೋದರೆ, ಹೋಟೆಲಿಗೆ ಹೋದರೆ, ಮನೆಬಾಗಿಲಿಗೆ ಬಂದ ಬಳೆಗಾರನ ಹತ್ತಿರ ಬಳೆ ಇಡಿಸಿಕೊಂಡರೆ, ಅಂಗಡಿಯಲ್ಲಿ ಸ್ನೋ, ಪೌಡರು, ಬಿಂದಿ ಮುಂತಾದ ಅಲಂಕಾರ ಸಾಮಗ್ರಿಗಳನ್ನು ಕೊಂಡರೆ, ಸಕಲ ಅವಶ್ಯಕತೆಗಳಿಗೂ ದುಡ್ಡು ಕೊಡುತ್ತಿದ್ದವನು ರಾಮಚಂದ್ರ. ತೌರಿನಲ್ಲಾದರೆ ಅಪ್ಪ. ಸೀರೆ ಮಡಿಕೆಗಳ ನಡುವೆ ಐದು, ಹತ್ತರ ನೋಟುಗಳನ್ನು ಅಡಗಿಸಿಟ್ಟು ಅಷ್ಟೈಶ್ವರ್ಯ ಎಂಬಂತೆ ಕಾಪಿಟ್ಟುಕೊಂಡಿದ್ದ ವಾರಗಿತ್ತಿ ಒಮ್ಮೆ ತನ್ನ ಖಜಾನೆಯನ್ನು ಇವಳಿಗೆ ತೋರಿಸಿ ಬೀಗಿದ್ದಳು. ಅದೆಲ್ಲಾ ಖರ್ಚು ಮಾಡುವುದಕ್ಕೆ ಕಾದಿಟ್ಟುಕೊಂಡ ದುಡ್ಡು ಎಂದು ನಾಗಶ್ರೀಗೆ ಅನಿಸಿರಲಿಲ್ಲ. ಖರ್ಚು ಮಾಡದಿರಲು ಕೂಡಿಟ್ಟುಕೊಂಡಿದ್ದ ದುಡ್ಡು. ನಾಗಶ್ರೀ ವಾರಗಿತ್ತಿಗೆ ಹೇಳಿದ್ದಳು,

'ಅಡಿಗೆ, ತಿಂಡಿ ಕೆಲಸ ನಂಗೆ ಬಿಟ್ಬಿಡಿ. ರುಚೀಲಿ ಚೂರು ಹೆಚ್ಚು ಕಮ್ಮಿ ಅಂತಾದ್ರೂ ಮಾಡ್ತೀನಿ ನಾನು. ನೀವು ಅತ್ತೆ ಹಂಗೆ ದಿನ ಇಡೀ ಅಡಿಕೆ ಸುಲಿತ ಮಾಡ್ಕಳ್ಳಿ..' ಉದಾರವಾಗಿ ನಾಗಶ್ರೀ ಕೊಟ್ಟ ಈ ಆಶ್ವಾಸನೆಯಿಂದ ಹನಿಗಣ್ಣಾಗಿದ್ದಳು ಭವಾನಿ.

'ಇಷ್ಟು ಹೇಳಿದ್ಯಲ್ಲ, ಸಾಕೇ ಸಾಕು. ನಿಂಗೆ ಕೆಲಸ ಮಾಡಿ ಅಭ್ಯಾಸ ಎಲ್ಲುಂಟು? ಏಳುಮಲ್ಲಿಗೆ ತೂಕದ ರಾಜಕುಮಾರಿ ನೀನು. ಯಾವತ್ತೂ ಹಂಗೇ ಇದ್ಬಿಡು. ಕೆಲಸ ಗಿಲಸ ನಂಗೆ ಬಿಟ್ಬಿಡು..'

ಭವಾನಿ ಸೆರಗು ಮುಂದೆಳೆದುಕೊಂಡು ಕಣ್ಣೊರೆಸಿಕೊಂಡಿದ್ದನ್ನು ಕಂಡು ಕೌತುಕದಿಂದ ಕೇಳಿದ್ದಳು ನಾಗಶ್ರೀ,

'ಇಷ್ಟಕ್ಕೆ ಅಳು ಬಂದಿದ್ದೆಂತಕ್ಕೆ ಮಾರಾಯ್ತೀ, ಒಳ್ಳೇ ತಮಾಷಿ..'

'ನಿಂಗೊತ್ತಾಗಲ್ಲ ಕಣೇ. ಯಾರಾರೂ ಒಂದು ಒಳ್ಳೇ ಮಾತು ಆಡಿಬಿಟ್ರೆ ನಂಗೆ ಅಳು ಬಂದ್ಬಿಡುತ್ತೆ. ತೌರುಮನೇಲಿ ನಾವು ಪಂಚಕನ್ಯೆಯರು, ಗೊತ್ತುಂಟಲ್ಲ ನಿಂಗೆ? ಅಲ್ಲೂ ಅಯ್ಯೋ.. ಅನ್ನೋರಿಲ್ಲ. ಇಲ್ಲೂ ಅಯ್ಯೋ.. ಅನ್ನೋರಿಲ್ಲ..'

'ನಾನಿದೀನಲ್ಲ, ದಿನಕ್ಕೊಂದ್ಸತಿ ಅಯ್ಯೋ.. ಅಂತೀನಿ, ಸರೀನಾ?'

ಭವಾನಿ ನಿರೀಕ್ಷೆಯೇ ಮಾಡದಿದ್ದ ಹಾಗೆ ಅವಳನ್ನು ಬರಸೆಳೆದು ಅವಳ ಕೆನ್ನೆಯ ಮೇಲೆ ಮುತ್ತಿನ ಅಚ್ಚೊತ್ತಿದ್ದಳು ನಾಗಶ್ರೀ.

'ದಿನ ಹೋದ್ಹಂಗೆ ನಿಂಗೆ ಸೊಕ್ಕು ಹೆಚ್ಚಾಗ್ತಿದೆ. ತಡಿ, ಹೇಳ್ತೀನಿ ರಾಮಣ್ಣಂಗೆ, ನಿಂಗೆ ಕೊಡೋದನ್ನ ನಂಗೆ ಕೊಟ್ಟು ಖಾಲಿ ಮಾಡ್ತಿದಾಳೆ ಅಂತ..'

ಹಾಲು, ಜೇನಿನ ಹಾಗೆ ಹೊಂದಿಕೊಂಡಿದ್ದರು ವಾರಗಿತ್ತಿಯರು. ಇಬ್ಬರಲ್ಲಿ ಪೈಪೋಟಿಯೋ, ಕೆಲಸದ ವಿಷಯದಲ್ಲಿ ಕಿತ್ತಾಟವೋ ಇದ್ದರೆ ಜಗಳ, ಕದನ. ಹಾಗೇನಿಲ್ಲದೆ ನಾಗಶ್ರೀಯನ್ನು ಒಂದು ಮೆಟ್ಟಿಲು ಮೇಲಿನ ಸ್ಥಾನದಲ್ಲಿ ಕೂರಿಸಿ ಅವಳಿಗೆ ಹೆಚ್ಚುಗಾರಿಕೆಯ ಪಟ್ಟ ಕೊಟ್ಟುಬಿಟ್ಟಿದ್ದಳು ಭವಾನಿ. ಇದಕ್ಕೆ ಪ್ರತಿಯಾಗಿ ಎನ್ನುವಂತೆ ನಾಗಶ್ರೀ ತೌರೂರಿನಲ್ಲಿ ತನಗೆ ಸದಾ ಕೊಡಮಾಡುವ ಸೀರೆಗಳಲ್ಲಿ ಭವಾನಿಗೆ ಯಾವುದಾದರೂ ಇಷ್ಟವಾಗಿದ್ದನ್ನು ಅವಳ ಕಂಗಳ ಹೊಳಪಿನಿಂದಲೇ ಗುರ್ತಿಸಿ ಉದಾರಿಯಾಗಿ ಆ ಸೀರೆಯನ್ನು ಅವಳಿಗೆ ಕೊಟ್ಟುಬಿಡುತ್ತಿದ್ದಳು.

ಸಮಾ ಅಳತೆ ಕೊಟ್ಟು ಕುಪ್ಪಸ ಹೊಲಿಸ್ಕಳ್ಳಿ ಅಕ್ಕಾ. ಕುಪ್ಪಸ ಚೆನ್ನಾಗಿ ಹೊಲೀದಿದ್ರೆ ಸೀರೆಯ ಚಂದಾನೇ ಹೋಗ್ಬಿಡುತ್ತೆ.. ಎನ್ನುವಂತಾ ಪುಕ್ಕಟೆ ಸಲಹೆ ಕೊಟ್ಟು, ಎಷ್ಟೋ ಸಲ ಪೇಟೆಗೆ ಹೋಗುವಾಗ ಅಕ್ಕನ ಅಳತೆಯ ಕುಪ್ಪಸ ತಾನೇ ತೆಗೆದುಕೊಂಡು ಹೋಗಿ ಹೊಲಿಯಲು ಕೊಟ್ಟು ಬರುತ್ತಿದ್ದಳು. ಹಾಗಂತ ಈ ಮನೆಯಲ್ಲಿ ಉಡಲು, ತೊಡಲು ಅರೆ ಇತ್ತು ಅಂತೇನಿಲ್ಲ. ಆದರೆ ನಾಗಶ್ರೀಯ ತೌರುಮನೆಗೆ ಹೋಲಿಸಿದರೆ ಇಲ್ಲಿ ಆ ಮಟ್ಟದ ಆರ್ಥಿಕ ಬಲ ಇಲ್ಲ. ಇದ್ದಿದ್ದರಲ್ಲೂ ಎರಡು ಪಾಲು ಎನ್ನುವ ವಾಸ್ತವವಂತೂ ಇದ್ದೇ ಇತ್ತು.

ನಾಗಶ್ರೀಯ ಆದರದ ಆಹ್ವಾನವನ್ನು ಮನ್ನಿಸಿ ರಾಧಮ್ಮ ಮೊಮ್ಮಗಳ ದರ್ಶನಾಕಾಂಕ್ಷಿಯಾಗಿ ಬೀಗರ ಮನೆಗೆ ಹೋಗಿ ಬಂದರಲ್ಲ, ಅಲ್ಲಿಯವರೆಗೆ ಅವರ ಮನದೊಳಗಿದ್ದ ಬಿಗುಮಾನದ ಪೊರೆ ಕಳಚಿ ಬಿದ್ದಂತಾಗಿತ್ತು. ಅಲ್ಲಿ ಆತ್ಮೀಯ ಸ್ವಾಗತ ಸಿಕ್ಕಿದ್ದು ಮಾತ್ರವಲ್ಲ, ಪ್ರೀತಿಯ ಮೊಮ್ಮಗಳು ಅಪರೂಪಕ್ಕೆ ಸಿಕ್ಕಿದ ದೊಡ್ಡಮ್ಮನಿಗೆ ಅಂಟಿಕೊಂಡುಬಿಟ್ಟಳು.

'ಮರೆತಿಲ್ಲ ಮುಂಡೇದು. ಎಷ್ಟಾರೂ ರಕ್ತ ಒಂದೇ ಅಲ್ವಾ?' ರಾಧಮ್ಮನಿಗೆ ಕೋಡು. ಕೆಲವು ಮಕ್ಕಳಿಗೆ ಹೊಸ ಮುಖ ಇಲ್ಲ ಎನ್ನುವ ವಾಸ್ತವ ಅವರಿಗೆ ಗೊತ್ತಿಲ್ಲದ್ದೇನಲ್ಲ. ಆದರೆ ಮೊಮ್ಮಗಳ ವರ್ತನೆಯನ್ನು ಆ ಗುಂಪಿಗೆ ಸೇರಿಸಲು ಒಲ್ಲೆ ಎನ್ನುತ್ತಿದೆ ಮನಸ್ಸು. ನಿಂತಲ್ಲಿ ನೀರು, ಕುಳಿತಲ್ಲಿ ಮಣೆಯ ಉಪಚಾರ ಮಾಡಿಸಿಕೊಳ್ಳುತ್ತಾ ನಾಕು ದಿನ ಕಳೆದಿದ್ದಾಯ್ತು.

'ಬರ್ತೀಯನೇ ಪುಟ್ಟಿ? ನಿಮ್ಮನೆಗೆ ಹೋಗೋಣ..' ಬುಡ ಹಾಕಿದ್ದರು ರಾಧಮ್ಮ.

ರಾಮಚಂದ್ರ, ನಾಗಶ್ರೀ ಮಕ ಮಕ ನೋಡಿಕೊಂಡಿದ್ದರು. ನಡುಮಧ್ಯ ಬಾಯಿ ಹಾಕಿದ್ದು ಸರೋಜಮ್ಮ,

'ಅವಳಿಗೇನು, ಹೊರಟುಬಿಡ್ತಾಳೆ. ಇಲ್ಲಿ ಇಸ್ಕೂಲಿಗೆ ಹೋಗ್ತಿದಾಳೆ. ಮಧ್ಯೆ ಚಕ್ರ ಹಾಕಿದ್ರೆ ಮತ್ತೆ ಶುರುವಾಗುತ್ತೆ ರಗಳೆ. ಮೊದಲೆಲ್ಲಾ ಇವಳ ಜೊತೆ ನಾನೂ ಇಸ್ಕೂಲಲ್ಲಿ ಕೂತಿರ್ಬೇಕಿತ್ತು ಮಾರಾಯ್ರಾ, ಹಿಡಿದ ಸೆರಗು ಬಿಡ್ತಿರ್ಲಿಲ್ಲ..'

'ಇಷ್ಟು ಬೇಗ ಇಸ್ಕೂಲಾ?' ಬಾಯಿ ಕಳೆದುಕೊಂಡು ಕೇಳಿದ್ದರು ರಾಧಮ್ಮ.

'ಅದೇ, ಬಾಲವಾಡೀನೋ, ಎಂತದೋ. ಈ ಹಳ್ಳೀಲಿ ಹೊಸ್ತಾಗಿ ಶುರು ಮಾಡಿದಾರೆ. ಮಕ್ಕಳು ಸಾಲ್ದು ಅಂತ ಮನೆಬಾಗ್ಲಿಗೆ ಬಂದು ಕೂತ್ಗಂಡಿದ್ರು. ವಾರಗೆಯೋರ ಜತೆ ಸಿಕ್ಕಿದ್ರೆ ಇದಕ್ಕೂ ಹೊತ್ತು ಹೋಗುತ್ತೆ..'

'ಬೆರಳು ಚೀಪುವ ವಯಸ್ಸಿನ ಮಗುವನ್ನು ಈಗಲೇ ಇಸ್ಕೂಲಿಗೆ ಕಳಿಸುವುದಾ? ಈ ಸೌಭಾಗ್ಯಕ್ಕೆ ಅದನ್ನು ಇಲ್ಲಿ ತಂದು ಬಿಡಬೇಕಾಗಿತ್ತಾ? ಅಲ್ಲೇ ಅಣ್ಣನ ಜೊತೆ ಮನೆ ಬಾಗ್ಲಲ್ಲಿ ಆಡ್ಕಂಡಿರ್ತಿತ್ತು..'

ರಾಧಮ್ಮ ತಮಗನಿಸಿದ್ದನ್ನು ಆ ಕ್ಷಣದಲ್ಲಿ ಬಾಯಿ ಬಿಟ್ಟು ಹೇಳಿರಲಿಲ್ಲ. ಅವರ ಅನುಮಾನ ಗೊತ್ತು ಮಾಡಿಕೊಂಡವನಂತೆ ರಾಮಚಂದ್ರ ಹೇಳಿದ್ದ,

'ಈಗಿಂದ ನಾಕಕ್ಷರ ಕಲೀಲಿ, ಕೈಯಾಗಲ್ಲ. ನಾಳೆ ಇಸ್ಕೂಲಿಗೆ ಸೇರ್ಸೋ ಹೊತ್ತಿಗೆ ಮಗ್ಗಿ, ಬಾಯಿಪಾಠ, ಅಕ್ಷರ ಎಲ್ಲಾ ಬಂದ್ಬಿಟ್ಟಿರುತ್ತೆ..'


ಅವನ ಮಾತಿಗೆ ದನಿಗೂಡಿಸಿದ್ದಳು ನಾಗಶ್ರೀ,

'ಮೂರು ಸಂಜೆ ಹೊತ್ತಿಗೆ ಕೈಕಾಲು ತೊಳೆಸಿ ಕೂರಿಸ್ಗಂಡು ಅಪ್ಪ ದಿನಾ ಬಾಯಿಪಾಠ ಹೇಳ್ಕೊಡ್ತಾನೆ. ಎಷ್ಟು ಚೆನ್ನಾಗಿ ಕಲ್ತಿದೆ ಗೊತ್ತಾ? ಪ್ರಭವ, ವಿಭವ ಅಂತ ಸಂವತ್ಸರದ ಹೆಸರು ಹೇಳೋಕೆ ನಂಗೇ ಬರಲ್ಲ..' ಮಗಳ ಬುದ್ಧಿವಂತಿಕೆಯ ಬಗ್ಗೆ ಅಮ್ಮನಿಗೆ ಹೆಮ್ಮೆ. ಇಡೋಕೆ ಜಾಗವಿಲ್ಲದಷ್ಟು ಎಂದು ಸೇರಿಸುವುದು ಅತಿರೇಕವಾದೀತಾ? ಬಾಯಲ್ಲಿ ಏನೇ ಹೇಳಿದರೂ ತನಗೆ ಅವತ್ತು ಬಾಳೆಕಾಯಿ ಉಬ್ಬೆಗೆ ಹಾಕಿ ಹಣ್ಣು ಮಾಡುತ್ತಿದ್ದ ವಿಧಾನ ನೆನಪಾಗಿತ್ತು ಎಂಬುದನ್ನು ನೆನೆದು ತನ್ನ ಸ್ಮರಣಶಕ್ತಿಯ ಕುರಿತು ತಾನೇ ಬೆಟ್ಟು ಕಚ್ಚಿಕೊಂಡ ರಾಮಚಂದ್ರ. ಒಣಹುಲ್ಲು ತುಂಬಿದ ಡಬ್ಬದಲ್ಲಿ ಬಾಳೆಕಾಯಿ ಚಿಪ್ಪುಗಳನ್ನು ಹಾಕಿ, ಮೇಲೆ ಮತ್ತಷ್ಟು ಒಣಹುಲ್ಲು ಹಾಕಿ ಮುಚ್ಚಿ, ಶಾಖಕ್ಕೆ ಕಾಯಿಗಳು ಮಾಗಿ ಹಳದಿಯಾಗಿ ಹಣ್ಣಾಗಿ ಬಿಡುತ್ತಿದ್ದುವು. ಮನೆಯಲ್ಲಿ ಏನಾದರೂ ವಿಶೇಷ ಕಟ್ಲೆ ಇದ್ದಾಗ ಇಂತಾ ದಿನ ಕಾಯಿಗಳನ್ನು ಮಾಗಲು ಹಾಕಿಟ್ಟರೆ ಇಂತಾ ದಿನಕ್ಕೆ ಹಣ್ಣಾಗುತ್ತವೆ ಎನ್ನುವ ಅನುಭವದಿಂದ ಬಂದಂತಾ ನಿರ್ದಿಷ್ಟ ಲೆಕ್ಕಾಚಾರ ಇತ್ತು. ಹೆಂಡತಿ ಕಸುಗಾಯಿಯನ್ನು ಮಾಗಿಸಲು ಹೊರಟಿದ್ದಾಳೆನ್ನುವುದಕ್ಕಿಂತ ಮಗಳು ಅಪ್ಪ, ಅಮ್ಮನ ಜೊತೆ ಬೆಳೆಯುತ್ತಾ ಅವರ ಏಕತಾನತೆಯನ್ನು ನೀಗಲಿ ಎನ್ನುವುದು ಅವಳ ಬಯಕೆ ಎಂಬುದನ್ನು ರಾಮಚಂದ್ರ ಬಲ್ಲವನೇ. ಅಂತೂ ಇಂತೂ ಪೂರ್ಣಿಮಾ ಎನ್ನುವ ಅವರ

## ಚುಟುಕು

ನೋಟಕ್ಕೆ ಅದು ಒಂದು
ಸಾಸಿವೆಯ ಗಾತ್ರ
ಅರಿತಾಗ ಆಲದಂತೆ
ಆಳ, ಅಗಲ, ಎತ್ತರ!

★ **ದೇವಕಿಸುತ**



ಈಶ್ವರ